**ಜಾಹೀರಾತು ಸಂಖ್ಯೆ: 01, 02 ಮತ್ತು 03/2010 ರಲ್ಲಿನ**
**ನಿರ್ವಾಹಕ / ಚಾಲಕ / ಚಾಲಕ-ಕಂ-ನಿರ್ವಾಹಕ / ತಾಂತ್ರಿಕ-ಬಿ ಹುದ್ದೆಗಳ**
**ಆನ್‌ಲೈನ್ ಅರ್ಜಿಯನ್ನು ಭರ್ತಿ ಮಾಡುವ ವಿಧಾನ**

1. **ಹೆಸರು** : ಎಸ್.ಎಸ್.ಎಲ್.ಸಿ ಅಂಕಪಟ್ಟಿಯಲ್ಲಿರುವಂತೆ ನಿಮ್ಮ ಹೆಸರನ್ನು ಭರ್ತಿ ಮಾಡಬೇಕು.

2. **ತಂದೆಯ ಹೆಸರು** : ಎಸ್.ಎಸ್.ಎಲ್.ಸಿ ಅಂಕಪಟ್ಟಿಯಲ್ಲಿರುವಂತೆ ನಿಮ್ಮ ತಂದೆಯ ಹೆಸರನ್ನು ಭರ್ತಿ ಮಾಡಬೇಕು

3. **ಲಿಂಗ** : ನೀವು ಮಹಿಳೆಯೋ ಅಥವಾ ಪುರುಷರೋ ಎಂಬ ಬಗ್ಗೆ ಲಿಂಗವನ್ನು ಗುರುತಿಸಬೇಕು.

4. **ಜನ್ಮ ದಿನಾಂಕ:** : ಎಸ್.ಎಸ್.ಎಲ್.ಸಿ. ಅಥವಾ ತತ್ಸಮಾನ ಪರೀಕ್ಷೆಯ ಪ್ರಮಾಣ ಪತ್ರ / ವರ್ಗಾವಣೆಯ ಪ್ರಮಾಣ ಪತ್ರ / ಜನ್ಮ ದಿನಾಂಕವನ್ನು ತೋರಿಸುವ ಸಂಚಿತ ದಾಖಲೆಯ ಉದ್ಧೃತ ಭಾಗದಲ್ಲಿ ನಮೂದಿಸಿರುವ ನಿಮ್ಮ ಜನ್ಮ ದಿನಾಂಕವನ್ನು ಭರ್ತಿ ಮಾಡಬೇಕು.

5. **ವಿಳಾಸ** : ನಿಮ್ಮ ಸಂಪೂರ್ಣ ಅಂಚೆ ವಿಳಾಸ (ಪಿನ್‌ಕೋಡ್ ಸಂಖ್ಯೆಯನ್ನು ಕಡ್ಡಾಯವಾಗಿ ನಮೂದಿಸಲು ಸೂಚಿಸಲಾಗಿದೆ)

6. **ವಿದ್ಯಾರ್ಹತೆ** :

**ಅ. ನಿರ್ವಾಹಕ ಹುದ್ದೆಗೆ**

ಪಿಯುಸಿ / ಜೆಓಡಿ / ಜೆಎಲ್‌ಸಿ / ಜೆಓಡಿ / ಇತರೆ : ನೀವು ಯಾವ ವಿದ್ಯಾರ್ಹತೆ ಹೊಂದಿರುತ್ತೀರಿ ಎಂಬ ಬಗ್ಗೆ ನಮೂದಿಸಬೇಕು.

**ಆ. ಚಾಲಕ/ಚಾಲಕ-ಕಂ-ನಿರ್ವಾಹಕ ಹುದ್ದೆಗೆ**

ಎಸ್.ಎಸ್.ಎಲ್.ಸಿ / ಎಸ್.ಎಸ್.ಸಿ. / ಇತರೆ : ನೀವು ಯಾವ ವಿದ್ಯಾರ್ಹತೆ ಹೊಂದಿರುತ್ತೀರಿ ಎಂಬ ಬಗ್ಗೆ ನಮೂದಿಸಬೇಕು.

**ಇ. ತಾಂತ್ರಿಕ-ಬಿ ಹುದ್ದೆಗೆ**

ಐಟಿಐ / ಐಟಿಸಿ / ಜೆಎಲ್‌ಸಿ / ಎನ್‌ಎಸಿ ಜೆಒಸಿ / ಜೆಓಡಿ / ಇತರೆ : ನೀವು ಯಾವ ವಿದ್ಯಾರ್ಹತೆ ಹೊಂದಿರುತ್ತೀರಿ ಎಂಬ ಬಗ್ಗೆ ನಮೂದಿಸಬೇಕು.

7. **ಶೈಕ್ಷಣಿಕ ವಿದ್ಯಾರ್ಹತೆಯಲ್ಲಿ ಪಡೆದಿರುವ ಅಂಕಗಳ ವಿವರಗಳನ್ನು ನಮೂದಿಸುವ ಬಗ್ಗೆ:**

**ಅ. ನಿರ್ವಾಹಕ ಹುದ್ದೆಗೆ:**

(i) ಅಭ್ಯರ್ಥಿಯು ಪಿ.ಯು.ಸಿ ಅಥವಾ ತತ್ಸಮಾನ ವಿದ್ಯಾರ್ಹತೆಯನ್ನು ಹೊಂದಿದ್ದಲ್ಲಿ ಅಂತಿಮ ವರ್ಷದ ಪರೀಕ್ಷೆಯಲ್ಲಿನ ಅಂಕಗಳನ್ನು ಈ ಕೆಳಕಂಡಂತೆ ನಮೂದಿಸುವುದು.

ಉದಾ: ಅಂತಿಮ ಪಿ.ಯು.ಸಿ. ಪರೀಕ್ಷೆಯಲ್ಲಿ ಒಟ್ಟು 600 ಅಂಕಗಳಿಗೆ 450 ಅಂಕಗಳನ್ನು ಪಡೆದಿದ್ದರೆ ಹಾಗೂ 01/05/2009 ರಂದು ಉತ್ತೀರ್ಣರಾಗಿದ್ದಲ್ಲಿ ಈ ಕೆಳಗಿನಂತೆ ನಮೂದಿಸತಕ್ಕದ್ದು.

| **ಗರಿಷ್ಟ ಅಂಕಗಳು** | | | | | **ಗಳಿಸಿರುವ ಅಂಕಗಳು** | | | | | **ತೇರ್ಗಡೆಯಾದ ವರ್ಷ** |
|---|---|---|---|---|---|---|---|---|---|---|
| 0 | 6 | 0 | 0 | | 0 | 4 | 5 | 0 | | 2009 |

(ii)) ಜೆ.ಓ.ಸಿ ಮತ್ತು ಜೆ.ಎಲ್.ಸಿ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರುವ ಅಭ್ಯರ್ಥಿಗಳು ಅಂಕಗಳನ್ನು ನಮೂದಿಸುವ ಬಗ್ಗೆ.

| | |
|---|---|
| 2004–05ನೇ ಸಾಲಿಗಿಂತ ಮುಂಚೆ ಜೆ.ಓ.ಸಿ ಪರೀಕ್ಷೆ ತೇರ್ಗಡೆಯಾದ ಅಭ್ಯರ್ಥಿಗಳು | ಜೆ.ಓ.ಸಿ. ಪರೀಕ್ಷೆಯ ಎರಡನೇ ಸೆಮಿಸ್ಟರ್ ಐಚ್ಛಿಕ ವಿಷಯಗಳ ಮತ್ತು ನಾಲ್ಕನೇ ಸೆಮಿಸ್ಟರ್‌ನ ಭಾಷಾ ವಿಷಯಗಳು ಮತ್ತು ಐಚ್ಛಿಕ ವಿಷಯಗಳ ಗರಿಷ್ಟ ಅಂಕಗಳು ಹಾಗೂ ಪಡೆದ ಒಟ್ಟು ಅಂಕಗಳನ್ನು ನಮೂದಿಸಬೇಕು. |
| 2004–05ನೇ ಸಾಲು ಮತ್ತು ನಂತರ ಜೆ.ಓ.ಸಿ. ಪರೀಕ್ಷೆ ತೇರ್ಗಡೆಯಾದ ಅಭ್ಯರ್ಥಿಗಳು | ಜೆ.ಓ.ಸಿ. ಪರೀಕ್ಷೆಯ ನಾಲ್ಕನೇ ಸೆಮಿಸ್ಟರ್ ಐಚ್ಛಿಕ ವಿಷಯಗಳ ಮತ್ತು ಭಾಷಾ ವಿಷಯಗಳ ಗರಿಷ್ಟ ಅಂಕಗಳು ಹಾಗೂ ಪಡೆದ ಒಟ್ಟು ಅಂಕಗಳನ್ನು ನಮೂದಿಸಬೇಕು. |
| ಪಿ.ಯು.ಸಿ ಪರೀಕ್ಷೆಯಲ್ಲಿ ಪಾಸಾದ ನಂತರ ಜೆ.ಓ.ಸಿ. ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದ ಅಭ್ಯರ್ಥಿಗಳು | ಪಿ.ಯು.ಸಿ ಎರಡನೇ ವರ್ಷದ ಪರೀಕ್ಷೆಯಲ್ಲಿ ಪಾಸಾದ ನಂತರ ಜೆ.ಓ.ಸಿ. ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದ್ದು, ಜೆ.ಓ.ಸಿ.ಯಲ್ಲಿ ಭಾಷಾ ಜ್ಞಾನದ ವಿನಾಯಿತಿ ಪಡೆದಿದ್ದಲ್ಲಿ ಪಿ.ಯು.ಸಿ ಎರಡನೇ ವರ್ಷದ ಪರೀಕ್ಷೆಯ ಭಾಷಾ ವಿಷಯಗಳಿಗೆ ನಿಗಧಿಪಡಿಸಿದ ಗರಿಷ್ಟ ಅಂಕಗಳು ಮತ್ತು ಪಡೆದ ಒಟ್ಟು ಅಂಕಗಳನ್ನು ಜೆ.ಓ.ಸಿ ಪರೀಕ್ಷೆಯ ಎರಡನೇ ಮತ್ತು ನಾಲ್ಕನೇ ಸೆಮಿಸ್ಟರ್‌ನ ಐಚ್ಛಿಕ ವಿಷಯಗಳ ಗರಿಷ್ಟ ಹಾಗೂ ಪಡೆದ ಅಂಕಗಳಿಗೆ ಸೇರಿಸಿ ನಮೂದಿಸಬೇಕು. |
| ಜೆ.ಎಲ್.ಸಿ. ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದ ಅಭ್ಯರ್ಥಿಗಳು | ಒಂದನೇ ಮತ್ತು ಎರಡನೇ ವರ್ಷದ ಒಟ್ಟು ಅಂಕಗಳು ಮತ್ತು ಪಡೆದ ಒಟ್ಟು ಅಂಕಗಳನ್ನು ನಮೂದಿಸಬೇಕು. |

**<u>ಆ. ಚಾಲಕ ಮತ್ತು ಚಾಲಕ–ಕಂ–ನಿರ್ವಾಹಕ ಹುದ್ದೆಗೆ:</u>**

ಅಭ್ಯರ್ಥಿಯು ಎಸ್.ಎಸ್.ಎಲ್.ಸಿ. ಅಥವಾ ತತ್ಸಮಾನ ವಿದ್ಯಾರ್ಹತೆಯಲ್ಲಿ ಗರಿಷ್ಟ ಅಂಕಗಳು ಮತ್ತು ಪಡೆದ ಅಂಕಗಳನ್ನು ಈ ಕೆಳಕಂಡಂತೆ ನಮೂದಿಸುವುದು.

ಉದಾ: ಅಭ್ಯರ್ಥಿಯು ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಒಟ್ಟು 625 ಅಂಕಗಳಿಗೆ 450 ಅಂಕಗಳನ್ನು ಪಡೆದಿದ್ದರೆ ಹಾಗೂ 01/05/2009 ರಂದು ಉತ್ತೀರ್ಣರಾಗಿದ್ದಲ್ಲಿ ಈ ಕೆಳಗಿನಂತೆ ನಮೂದಿಸತಕ್ಕದ್ದು.

| ಗರಿಷ್ಟ ಅಂಕಗಳು | | | | | ಗಳಿಸಿರುವ ಅಂಕಗಳು | | | | | ತೇರ್ಗಡೆಯಾದ ವರ್ಷ |
|---|---|---|---|---|---|---|---|---|---|---|
| 0 | 6 | 2 | 5 | | 0 | 4 | 5 | 0 | | 2009 |

**<u>ಇ. ತಾಂತ್ರಿಕ–ಬಿ ಹುದ್ದೆಗೆ:</u>**

(i) ಅಭ್ಯರ್ಥಿಯು ಐಟಿಐ / ಐಟಿಸಿ / ಎನ್‌ಎಸಿ ಅಥವಾ ತತ್ಸಮಾನ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದಲ್ಲಿ ಈ ಕೆಳಕಂಡಂತೆ ಅಂಕಗಳನ್ನು ನಮೂದಿಸುವುದು.

ಉದಾ: ಅಭ್ಯರ್ಥಿಯು 800 ಗರಿಷ್ಟ ಅಂಕಗಳಿಗೆ 450 ಅಂಕಗಳನ್ನು ಪಡೆದಿದ್ದರೆ ಹಾಗೂ 01/06/2009 ರಂದು ಉತ್ತೀರ್ಣರಾಗಿದ್ದಲ್ಲಿ ಈ ಕೆಳಗಿನಂತೆ ನಮೂದಿಸತಕ್ಕದ್ದು.

| ಗರಿಷ್ಟ ಅಂಕಗಳು | | | | | ಗಳಿಸಿರುವ ಅಂಕಗಳು | | | | | ತೇರ್ಗಡೆಯಾದ ವರ್ಷ |
|---|---|---|---|---|---|---|---|---|---|---|
| 0 | 8 | 0 | 0 | | 0 | 4 | 5 | 0 | | 2009 |

**(ii) ಜೆ.ಓ.ಸಿ ಮತ್ತು ಜೆ.ಎಲ್.ಸಿ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರುವ ಅಭ್ಯರ್ಥಿಗಳು ಅಂಕಗಳನ್ನು ನಮೂದಿಸುವ ಬಗ್ಗೆ.**

| | |
|---|---|
| 2004–05ನೇ ಸಾಲಿಗಿಂತ ಮುಂಚೆ ಜೆ.ಓ.ಸಿ ಪರೀಕ್ಷೆ ತೇರ್ಗಡೆಯಾದ ಅಭ್ಯರ್ಥಿಗಳು | ಜೆ.ಓ.ಸಿ. ಪರೀಕ್ಷೆಯ ಎರಡನೇ ಸೆಮಿಸ್ಟರ್ ಐಚ್ಛಿಕ ವಿಷಯಗಳ ಮತ್ತು ನಾಲ್ಕನೇ ಸೆಮಿಸ್ಟರ್‌ನ ಭಾಷಾ ವಿಷಯಗಳು ಮತ್ತು ಐಚ್ಛಿಕ ವಿಷಯಗಳ ಗರಿಷ್ಟ ಅಂಕಗಳು ಹಾಗೂ ಪಡೆದ ಒಟ್ಟು ಅಂಕಗಳನ್ನು ನಮೂದಿಸಬೇಕು. |
| 2004–05ನೇ ಸಾಲು ಮತ್ತು ನಂತರ ಜೆ.ಓ.ಸಿ. ಪರೀಕ್ಷೆ ತೇರ್ಗಡೆಯಾದ ಅಭ್ಯರ್ಥಿಗಳು | ಜೆ.ಓ.ಸಿ. ಪರೀಕ್ಷೆಯ ನಾಲ್ಕನೇ ಸೆಮಿಸ್ಟರ್ ಐಚ್ಛಿಕ ವಿಷಯಗಳ ಮತ್ತು ಭಾಷಾ ವಿಷಯಗಳ ಗರಿಷ್ಟ ಅಂಕಗಳು ಹಾಗೂ ಪಡೆದ ಒಟ್ಟು ಅಂಕಗಳನ್ನು ನಮೂದಿಸಬೇಕು. |
| ಪಿ.ಯು.ಸಿ ಪರೀಕ್ಷೆಯಲ್ಲಿ ಪಾಸಾದ ನಂತರ ಜೆ.ಓ.ಸಿ. ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದ ಅಭ್ಯರ್ಥಿಗಳು | ಪಿ.ಯು.ಸಿ ಎರಡನೇ ವರ್ಷದ ಪರೀಕ್ಷೆಯಲ್ಲಿ ಪಾಸಾದ ನಂತರ ಜೆ.ಓ.ಸಿ. ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದ್ದು, ಜೆ.ಓ.ಸಿ.ಯಲ್ಲಿ ಭಾಷಾ ಜ್ಞಾನದ ವಿನಾಯಿತಿ ಪಡೆದಿದ್ದಲ್ಲಿ ಪಿ.ಯು.ಸಿ ಎರಡನೇ ವರ್ಷದ ಪರೀಕ್ಷೆಯ ಭಾಷಾ ವಿಷಯಗಳಿಗೆ ನಿಗಧಿಪಡಿಸಿದ ಗರಿಷ್ಟ ಅಂಕಗಳು ಮತ್ತು ಪಡೆದ ಒಟ್ಟು ಅಂಕಗಳನ್ನು ಜೆ.ಓ.ಸಿ ಪರೀಕ್ಷೆಯ ಎರಡನೇ ಮತ್ತು ನಾಲ್ಕನೇ ಸೆಮಿಸ್ಟರ್‌ನ ಐಚ್ಛಿಕ ವಿಷಯಗಳ ಗರಿಷ್ಟ ಹಾಗೂ ಪಡೆದ ಅಂಕಗಳಿಗೆ ಸೇರಿಸಿ ನಮೂದಿಸಬೇಕು. |
| ಜೆ.ಎಲ್.ಸಿ. ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದ ಅಭ್ಯರ್ಥಿಗಳು | ಒಂದನೇ ಮತ್ತು ಎರಡನೇ ವರ್ಷದ ಒಟ್ಟು ಅಂಕಗಳು ಮತ್ತು ಪಡೆದ ಒಟ್ಟು ಅಂಕಗಳನ್ನು ನಮೂದಿಸಬೇಕು. |

**8. ಮೀಸಲಾತಿ:**

| | |
|---|---|
| ಮಾಜಿ ಸೈನಿಕ / ಗ್ರಾಮೀಣ ಅಭ್ಯರ್ಥಿಯೇ / ಕನ್ನಡ ಮಾಧ್ಯಮ / ಇಲಾಖಾ ಅಭ್ಯರ್ಥಿಯೇ / ಯೋಜನಾ ನಿರಾಶ್ರಿತರೇ | : ನೀವು ಯಾವ ಮೀಸಲಾತಿಗಳನ್ನು ಕೋರುತ್ತೀರಿ ಎಂಬ ಬಗ್ಗೆ ನಿಗಧಿತ ವೃತ್ತದಲ್ಲಿ ಶೇಡ್ ಮಾಡಬೇಕು. |

**ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಸೇರಿದ ಅಭ್ಯರ್ಥಿಗಳು ಮಾತ್ರ ಜಾಹೀರಾತು 02/2010 ರಲ್ಲಿ ಹಿಂಬಾಕಿ ಚಾಲಕ ಹುದ್ದೆಗೆ ಅರ್ಜಿ ಸಲ್ಲಿಸಬಹುದಾಗಿರುತ್ತದೆ.**

**ಪರಿಶಿಷ್ಟ ಜಾತಿಗೆ ಸೇರಿದ ಅಭ್ಯರ್ಥಿಗಳು ಮಾತ್ರ ಜಾಹೀರಾತು 02/2010 ರಲ್ಲಿ ಹಿಂಬಾಕಿ ಚಾಲಕ–ಕಂ–ನಿರ್ವಾಹಕ ಹುದ್ದೆಗೆ ಅರ್ಜಿ ಸಲ್ಲಿಸಬಹುದಾಗಿರುತ್ತದೆ.**

**9. ಪ್ರವರ್ಗ**

| | |
|---|---|
| ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ / ಪ್ರವರ್ಗ–1 / 2ಎ / 2ಬಿ / 3ಎ / 3ಬಿ / ಸಾಮಾನ್ಯ ವರ್ಗ | : ನೀವು ಯಾವ ವರ್ಗಕ್ಕೆ ಸೇರಿರುತ್ತೀರಿ ಎಂಬ ಬಗ್ಗೆ ಸಂಬಂಧಪಟ್ಟ ವರ್ಗವನ್ನು ಗುರುತಿಸಬೇಕು. |

**10. ಚಾಲಕ ಪರವಾನಗಿ ಮಾಹಿತಿ (ಚಾಲಕ ಮತ್ತು ಚಾಲಕ-ಕಂ-ನಿರ್ವಾಹಕ ಹುದ್ದೆಗೆ ಮಾತ್ರ)**

ಚಾಲ್ತಿಯಲ್ಲಿರುವ ಭಾರಿ ವಾಹನ ಚಾಲನಾ ಪರವಾನಗಿ ಹಾಗೂ ಕರ್ನಾಟಕ ಬ್ಯಾಡ್ಜ್‌ನ್ನು ಹೊಂದಿದ್ದಲ್ಲಿ ಹೌದು ಎಂದು ನಮೂದಿಸುವುದು.

**11. ನಿರ್ವಾಹಕ ಪರವಾನಗಿ ಮಾಹಿತಿ (ನಿರ್ವಾಹಕ್ ಮತ್ತು ಚಾಲಕ-ಕಂ-ನಿರ್ವಾಹಕ ಹುದ್ದೆಗೆ ಮಾತ್ರ)**

ಚಾಲ್ತಿಯಲ್ಲಿರುವ ನಿರ್ವಾಹಕ ಪರವಾನಗಿ ಹಾಗೂ ಕರ್ನಾಟಕ ಬ್ಯಾಡ್ಜ್‌ನ್ನು ಹೊಂದಿದ್ದಲ್ಲಿ ಹೌದು ಎಂದು ನಮೂದಿಸುವುದು.

**12. ದೇಹದಾರ್ಢ್ಯತೆ**

ನಿಮ್ಮ ನಿಗಧಿ ಎತ್ತರ ಸೆಂ.ಮೀ.ಗಳಲ್ಲಿ ಹಾಗೂ ತೂಕ ಕೆ.ಜಿ.ಗಳಲ್ಲಿ ನಿಗಧಿತ ಬಾಕ್ಸ್‌ನಲ್ಲಿ ನಮೂದಿಸತಕ್ಕದ್ದು.

* ನಿರ್ವಾಹಕ ಹುದ್ದೆಗೆ ಎತ್ತರ ಮಾತ್ರ ನಮೂದಿಸುವುದು.

**13.** ನೀವು ಈ ಹಿಂದೆ ಸರ್ಕಾರದ ಅಥವಾ ಸರ್ಕಾರಿ ಸೌಮ್ಯದ ಸಂಸ್ಥೆಯಿಂದ ವಜಾ ಮಾಡಲ್ಪಟ್ಟಿದ್ದರೆ ಸಂಬಂಧಪಟ್ಟ ವೃತ್ತದಲ್ಲಿ ಶೇಡ್ ಮಾಡುವುದು ಹಾಗೂ ವಿವರವನ್ನು ಸ್ಪಷ್ಟವಾಗಿ ಸಂಬಂಧಿಸಿದ ಅಂಕಣದಲ್ಲಿ ನಮೂದಿಸುವುದು.

**14. ಶುಲ್ಕ ಪಾವತಿ ವಿವರ**

ಸ್ಟೇಟ್ ಬ್ಯಾಂಕ್ ಆಫ್ ಮೈಸೂರ್‌ನ ಯಾವುದೇ ಶಾಖೆಯಲ್ಲಿ ಮುಖ್ಯ ಲೆಕ್ಕಾಧಿಕಾರಿಗಳು ಹಾಗೂ ಆರ್ಥಿಕ ಸಲಹೆಗಾರರ್ರು, ಬೆಂ.ಮ.ಸಾ.ಸಂಸ್ಥೆ ರವರ ಖಾತೆಗೆ ನಿಗಧಿತ ಶುಲ್ಕವನ್ನು ಪಾವತಿ ಮಾಡಿದ ನಂತರ ಬ್ಯಾಂಕ್ ನಿಂದ ನೀಡುವ ಕ್ರಮ ಸಂಖ್ಯೆ / ಜರ್ನಲ್ ನಂಬರ್ ಹಾಗೂ ಪಾವತಿಸಿದ ದಿನಾಂಕವನ್ನು ತಪ್ಪದೇ ಅರ್ಜಿಯ ನಿಗಧಿತ ಬಾಕ್ಸ್‌ನಲ್ಲಿ ನಮೂದಿಸತಕ್ಕದ್ದು.

**15. ಇತರೆ ಸೂಚನೆಗಳು**

- ಭರ್ತಿ ಮಾಡಿದ ಅರ್ಜಿಯನ್ನು ಆನ್‌ಲೈನ್ ಮುಖಾಂತರ ಸಲ್ಲಿಸುವ ಮುನ್ನ ಘೋಷಣೆಯನ್ನು ತಪ್ಪದೇ ಓದಿಕೊಂಡು ಒಪ್ಪಿಕೊಂಡಿರಬೇಕು.
- ಅರ್ಜಿಯನ್ನು ಸೂಚನೆಗಳ ಕೆಳಭಾಗದಲ್ಲಿ ಮುದ್ರಿಸಿರುವ (Preview) ನಲ್ಲಿ ನೋಡಿ ಮನವರಿಕೆ ಮಾಡಿಕೊಂಡ ನಂತರ ಅರ್ಜಿಯನ್ನು ಸಂರಕ್ಷಿಸಬೇಕು (Save). ಅರ್ಜಿಯನ್ನು ಸಂರಕ್ಷಿಸಿದ ನಂತರ ಕಂಪ್ಯೂಟರ್‌ನಲ್ಲಿ ನೀಡುವ ನೋಂದಣಿ ಸಂಖ್ಯೆಯನ್ನು ತಪ್ಪದೇ ಬರೆದಿಟ್ಟುಕೊಳ್ಳುವುದು.
- ಅಭ್ಯರ್ಥಿಗಳ ಮಾಹಿತಿಗಾಗಿ ಅರ್ಜಿ ಸಲ್ಲಿಸಿದ ನಂತರ ಅದರ ಒಂದು ಪ್ರತಿಯನ್ನು ತಪ್ಪದೇ ಪ್ರಿಂಟ್ ತೆಗೆದುಕೊಳ್ಳುವುದು.
- ಅಭ್ಯರ್ಥಿಗಳು ಅರ್ಜಿ ಸಲ್ಲಿಸಿದ ನಂತರ ಅರ್ಜಿಯಲ್ಲಿ ನೋಂದಣಿ ಸಂಖ್ಯೆಯು ನಮೂದಿತವಾಗಿರುವುದೇ ಎನ್ನುವುದನ್ನು ಮನವರಿಕೆ ಮಾಡಿಕೊಳ್ಳುವುದು.
- **"ಅಭ್ಯರ್ಥಿಗಳು ಪ್ರತಿಯೊಂದು ಹುದ್ದೆಗೂ ಪ್ರತ್ಯೇಕ ಅರ್ಜಿಯನ್ನು ಸಲ್ಲಿಸತಕ್ಕದ್ದು".**
- ಅಂಗವಿಕಲ ಅಭ್ಯರ್ಥಿಗಳು ಈ ಹುದ್ದೆಗಳಿಗೆ ಅರ್ಜಿ ಸಲ್ಲಿಸಲು ಅರ್ಹರಿರುವುದಿಲ್ಲ.

- ಚಾಲಕ (ಹಿಂಬಾಕಿ) ಮತ್ತು ಚಾಲಕ-ಕಂ-ನಿರ್ವಾಹಕ (ಹಿಂಬಾಕಿ) ಹುದ್ದೆ, ಇವೆರಡು ಹುದ್ದೆಗಳಿಗೆ ಅರ್ಜಿ ಸಲ್ಲಿಸಿದ ಅಭ್ಯರ್ಥಿಗಳನ್ನು ಒಂದು ಬಾರಿ ಮಾತ್ರ ಚಾಲನಾ ವೃತ್ತಿ ಪರೀಕ್ಷೆಗೆ ಒಳಪಡಿಸಲಾಗುವುದು ಮತ್ತು ಅಭ್ಯರ್ಥಿಯು ಸದರಿ ವೃತ್ತಿ ಪರೀಕ್ಸೆಯಲ್ಲಿ ಪಡೆದ ಅಂಕಗಳನ್ನು ಚಾಲಕ (ಹಿಂಬಾಕಿ) ಮತ್ತು ಚಾಲಕ-ಕಂ-ನಿರ್ವಾಹಕ (ಹಿಂಬಾಕಿ) ಇವೆರಡೂ ಹುದ್ದೆಗಳಿಗೂ ಪರಿಗಣಿಸಲಾಗುವುದು.
- ಚಾಲಕ ಮತ್ತು ಚಾಲಕ-ಕಂ-ನಿರ್ವಾಹಕ ಹುದ್ದೆಗಳ ಚಾಲನಾ ವೃತ್ತಿ ಪರೀಕ್ಷೆಗೆ ಹಾಜರಾಗಲು ದಿನಾಂಕ:15/05/2010 ರ ನಂತರ ಸಂಸ್ಥೆಯ ವೆಬ್‌ಸೈಟ್ www.bmtccareers.com ನಿಂದ ಕರೆಪತ್ರಗಳನ್ನು ಮುದ್ರಿಸಿಕೊಳ್ಳುವುದು.

******